ಅ) 1604

ಆ) 91 ವಾಹನಗಳು

ಇ) ಈ ವಾಹನಗಳನ್ನು ದುರಸ್ತಿಗೊಳಿಸಲು ನಿರಂತರ ಹಾಗೂ ನಿಯಮಿತ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಈ) 224 ಹೊಸ ವಾಹನಗಳನ್ನು ಸೇರಿಸಲಾಗಿದೆ.

ಉ) 237 ಹೊಸ ವಾಹನಗಳನ್ನು ಸೇರಿಸುವ ಪ್ರಸ್ತಾವನೆಯಲ್ಲಿದೆ.

136 ವಾಹನಗಳು ಹೊಸ ಮಾರ್ಗಗಳಿಗಾಗಿ.

101 ವಾಹನಗಳು ಬದಲಿ ವ್ಯವಸ್ಥೆಗಾಗಿ

ಊ) – ಇಲ್ಲಾ –

ಋ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೆಚ್ಚಿನ ವಾಹನಗಳನ್ನು ಬೆಂಗಳೂರು ನಗರ ಸಾರಿಗೆಗೆ ಸೇರ್ಪಡಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಅವ್ಯವಸ್ಥೆ.

348. ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಅಸಮರ್ಥ ಸೇವೆಯಿಂದ ಪ್ರಯಾಣಿಕರುಗಳಿಗೆ ತೊಂದರೆಗಳಾಗಿ ಹಾಗೂ ಸಂಸ್ಥೆಯು ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) 1989–90, 1990–91, ಮತ್ತು 1991–92ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಂಭವಿಸಿದ ನಷ್ಟವು ಎಷ್ಟು ಮತ್ತು ನಷ್ಟಕ್ಕೆ ಕಾರಣಗಳೇನು ?

ಇ) ಈ ಹಾನಿಯನ್ನು ತಪ್ಪಿಸಲು ಸರ್ಕಾರ ಯೋಚಿಸುತ್ತಿದೆಯೇ ?

ಈ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಮತ್ತು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಉ) 1991–92 ಮತ್ತು 1992–93ನೇ ಸಾಲಿನಲ್ಲಿ ಹೊಸದಾಗಿ ಕ.ರಾ.ರ.ಸಾ. ಸಂಸ್ಥೆ ಖರೀದಿಸಿದ ಹೊಸ ಬಸ್ಸುಗಳ ಸಂಖ್ಯೆ ಎಷ್ಟು ? ಅವುಗಳನ್ನು ಯಾವ ರೀತಿ ವಿತರಿಸಲಾಗಿದೆ ?
(ಘಟಕಗಳ ವಿವರಣೆ ಕೊಡುವುದು)

ಊ) ಉತ್ತಮ ಸಾರಿಗೆ ಸೇವೆಯನ್ನು ನೀಡುವ ದಿಸೆಯಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) – ಹೌದು –

ಆ)	ಸಾಲು	ಮೊಬಲಗು
	ಲಾಭ	ನಷ್ಟ
	1989–90 –	3770–12
	1990–91 130.44	–
	1991–92 –	1909.45

ನಷ್ಟಕ್ಕೆ ಸಂಬಂಧಪಟ್ಟ ಹಲವು ಪ್ರಮುಖ ಕಾರಣಗಳು ಈ ಕೆಳಕಂಡಂತೆ ಇರುತ್ತವೆ.

1) ಸರ್ಕಾರದ ಆದೇಶದ ಮೇರೆಗೆ ವಿದ್ಯಾರ್ಥಿಗಳನ್ನೊಳಗೊಂಡಂತೆ ವಿವಿಧ ಪ್ರಯಾಣಿಕರಿಗೆ ರಿಯಾಯಿತಿ ದರದ ಪ್ರಯಾಣ ಸೌಲಭ್ಯವನ್ನು ಕಲ್ಪಿಸಿರುವುದರ ಬಾಬ್ತಿನಿಂದ ಸಾರಿಗೆ ಆದಾಯ ಬಾಬ್ತಿನಲ್ಲಿ ಸಂಭವಿಸುತ್ತಿರುವ 72.00 ಕೋಟಿ ರೂಪಾಯಿಗಳ ವಾರ್ಷಿಕ ಕಡಿತ.

2) ಖಾಸಗಿ ವಾಹನಗಳಿಗೆ ನಿಗದಿ ಪಡಿಸಿರುವುದಕ್ಕಿಂತ ಹೆಚ್ಚಿನ ವಾಹನ ತೆರಿಗೆಯನ್ನು ಸಾರಿಗೆ ಸಂಸ್ಥೆಗೆ ನಿಗದಿಪಡಿಸಲಾಗಿದೆ. ನಗರ ಸಾರಿಗೆಗೆ ನಿಗದಿಪಡಿಸಿರುವ ಮೋಟಾರು ವಾಹನ ತೆರಿಗೆಯು ಇತರೆ ರಾಜ್ಯಗಳ ನಗರ ಸಾರಿಗೆಗಳಿಗೆ ನಿಗದಿಪಡಿಸಿರುವುದಕ್ಕಿಂತಲೂ ಅಧಿಕವಾಗಿದೆ. ಈ ಬಾಬ್ತಿನಿಂದ ಸಂಸ್ಥೆಗೆ ವಾರ್ಷಿಕ 30 ಕೋಟಿ ರೂಪಾಯಿಗಳವರೆಗೆ ಅಧಿಕ ಹೊರೆಯಾಗಿರುತ್ತದೆ.

3) ಇಂಧನ, ಟೈರುಗಳು ಮತ್ತು ಟ್ಯೂಬುಗಳು ಬಿಡಿ ಭಾಗಗಳು ಮುಂತಾದ ಸಾಮಗ್ರಿಗಳ ಬೆಲೆಗಳಲ್ಲಿ ಕಾಲಕಾಲಕ್ಕೆ ಆಗಿರುವ ಹೆಚ್ಚಳ.

4) ಕಾಲ ಕಾಲಕ್ಕೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ರೀತ್ಯ ಸಂಸ್ಥೆಯ ನೌಕರರಿಗೂ ನೀಡುತ್ತಿರುವ ತುಟ್ಪಿ ಭತ್ಯದ ಕಂತುಗಳು.

5) ಕಾರ್ಮಿಕ ಒಕ್ಕೂಟ ಒಡಂಬಡಿಕೆಯ ಮೇರೆಗೆ ಕಾಲ ಕಾಲಕ್ಕೆ ಸಂಭವಿಸಿರುವ ಸಿಬ್ಬಂದಿ ವೇತನ ಪರಿಷ್ಕರಣೆ.

6) ಸಂಸ್ಥೆಯು ಸತತವಾಗಿ ನಷ್ಟವನ್ನು ಅನುಭವಿಸುತ್ತಿರುವುದರಿಂದ ತನ್ನದೇ ಆದ ಆಂತರಿಕ ಸಂಪನ್ಮೂಲಗಳನ್ನು ಹೊಂದದೇ ಹೋದ ಪರಿಣಾಮವಾಗಿ ಸಾಲಿಯಾನ ಶೇ. 14 ರಿಂದ 18ರವರೆಗೆ ಬಡ್ಡಿಯ ದರದ ಮೇಲೆ ವಿವಿಧ ವಾಣಿಜ್ಯ ಬ್ಯಾಂಕುಗಳು: ಸಂಸ್ಥೆಗಳಿಂದ ಪಡೆದ ಸಾಲದ ಮೇಲೆ ತೆರಬೇಕಾದ ಹೆಚ್ಚುವರಿ ಬಡ್ಡಿ.

7) ಲಾಭದಾಯಕವಾಗಿರಲಿ ಅಥವಾ ಇಲ್ಲದಿರಲಿ ಗಣನೆಗೆ ತೆಗೆದುಕೊಳ್ಳದೆ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವುದು.

ಇ) – ಹೌದು –

ಈ) ಸಂಸ್ಥೆಯ ಆರ್ಥಿಕ ಸೌಲಭ್ಯಗಳ ಅನುಗುಣವಾಗಿ ಅವ್ಯವಸ್ಥೆಯಿರುವ ಪ್ರದೇಶಗಳಿಗೆ ಸಾರಿಗೆ ಸೌಲಭ್ಯಗಳನ್ನು ಹೆಚ್ಚಿಸಿರುತ್ತದೆ. ಕ.ರಾ.ರ.ಸಾ. ಸಂಸ್ಥೆಯಲ್ಲಿನ ಹೆಚ್ಚಿನ ನಷ್ಟಕ್ಕೆ ಮೂಲಭೂತ ಕಾರ್ಯಾಚರಣೆಯ ಪದಾರ್ಥಗಳ ಬೆಲೆ ಹೆಚ್ಚಳದ್ದೇ ಕಾರಣ. ಇಂಧನ ಬಳಕೆಯಲ್ಲಿ, ಟೈರುಗಳ ಬಳಕೆಯಲ್ಲಿ, ವಾಹನ ಹಾಗೂ ಸಿಬ್ಬಂದಿಯ ಬಳಕೆಯಲ್ಲಿ ಸಿಬ್ಬಂದಿ ಪ್ರಮಾಣ ಇತರೇ ವಿಭಾಗಗಳಲ್ಲಿ ಮಿತವ್ಯಯ ಸಾಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) 1991–92ನೇ ಸಾಲಿನಲ್ಲಿ ಸಂಸ್ಥೆಯು 1060 ಹೊಸ ಅಡಿಗಟ್ಟುಗಳನ್ನು 574 ಟಾಟಾ ಮಾದರಿ

ಹಾಗೂ 486 ಲೇಲ್ಯಾಂಡ್ ಮಾದರಿ ಕೊಂಡಿರುತ್ತದೆ. ಹಾಗೂ 1238 ಹೊಸ ವಾಹನಗಳನ್ನು ಸೇರ್ಪಡೆ ಮಾಡಲಾಗಿದೆ. 1208 ಹೊಸ ವಾಹನಗಳನ್ನು ಸಂಸ್ಥೆಯ ವಾಹನ ಬಲಕ್ಕೆ ಕೆಳಕಂಡಂತೆ ಒದಗಿಸಲಾಗಿದೆ.

1. ಬೆಂಗಳೂರು ವಿಭಾಗ	112
2. ಕೋಲಾರ ವಿಭಾಗ	50
3. ಮೈಸೂರು ವಿಭಾಗ	32
4. ಹಾಸನ ವಿಭಾಗ	81
5. ಮಂಗಳೂರು ವಿಭಾಗ'	98
6. ವಿಜಾಪುರ ವಿಭಾಗ	123
7. ಬೆಳಗಾಂ ವಿಭಾಗ	104
8. ಹುಬ್ಬಳ್ಳಿ ವಿಭಾಗ	120
9. ಸಿರಸಿ ವಿಭಾಗ	59
10. ಗುಲ್ಬರ್ಗ ವಿಭಾಗ	77
11. ರಾಯಚೂರು ವಿಭಾಗ	61
12. ಬಳ್ಳಾರಿ ವಿಭಾಗ	94
13. ಬಿ.ಸ.ಸಾ. ವಿಭಾಗ	197
	1208

1992–93 ರ ಕಾರ್ಯ ಯೋಜನೆಯ ಪ್ರಕಾರ ಸಂಸ್ಥೆಯು 1600 ಹೊಸ ಅಡಿಗಟ್ಟುಗಳನ್ನು ನಿಯಮಿತ ಬೇಡಿಕೆಯ ಸಲುವಾಗಿ ಹಾಗೂ 200 ಅಡಿಗಟ್ಟುಗಳನ್ನು ತುರ್ತು ಸಂಬಂಧದಲ್ಲಿ ಖರೀದಿಸಲು ನಿರ್ಧರಿಸಿದೆ. 1.4.92ರಿಂದ 30.11.92ರ ವರೆಗೆ 702 ಹೊಸ ಅಡಿಗಟ್ಟುಗಳನ್ನು (326 ಟಾಟಾ ಮಾದರಿ ಹಾಗೂ 376 ಲೇಲ್ಯಾಂಡ್ ಮಾದರಿ) ಖರೀದಿಸಲಾಗಿದೆ. ಅವುಗಳಲ್ಲಿ ಈಗಾಗಲೇ ಅಂದರೆ 30.11.92ರವರೆಗೆ 700 ಹೊಸ ವಾಹನವನ್ನು ಸೇರ್ಪಡೆ ಮಾಡಲಾಗಿದೆ ಹಾಗೂ 690 ಹೊಸ ವಾಹನಗಳನ್ನು ಸಂಸ್ಥೆಯ ವಾಹನ ಬಲಕ್ಕೆ ವಿಭಾಗವಾರು ಕೆಳಕಂಡಂತೆ ಹಂಚಲಾಗಿದೆ.

1. ಬೆಂಗಳೂರು ಕೇಂದ್ರೀಯ ವಿಭಾಗ	78
2. ಬೆಂಗಳೂರು ಗ್ರಾಮಾಂತರ ವಿಭಾಗ	50
3. ಕೋಲಾರ "	45
4. ಮೈಸೂರು "	73
5. ಹಾಸನ ವಿಭಾಗ	41
6. ಮಂಗಳೂರು ವಿಭಾಗ	33
7. ಹುಬ್ಬಳ್ಳಿ ವಿಭಾಗ	59
8. ಗದಗ ವಿಭಾಗ	24
9. ದಾವಣಗೆರೆ ವಿಭಾಗ	25
10. ಶಿರಸಿ ವಿಭಾಗ	24
11. ಬೆಳಗಾಂ ವಿಭಾಗ	28
12. ವಿಜಾಪುರ ವಿಭಾಗ	18
13. ಬಾಗಲಕೋಟೆ ವಿಭಾಗ	23

14. ಗುಲ್ಬರ್ಗ ವಿಭಾಗ	51
15. ಬೀದರ್ ವಿಭಾಗ	25
16. ರಾಯಚೂರು ವಿಭಾಗ	39
17. ಬಳ್ಳಾರಿ ವಿಭಾಗ	33
18. ಬೆಂಗಳೂರು ನಗರ ಸಾರಿಗೆ ವಿಭಾಗ	21
	690

ಸಂಸ್ಥೆಯು ಮುಂಗಡವಾಗಿ ವಾರ್ಷಿಕ ಕಾರ್ಯ ಯೋಜನೆಯನ್ನು ರೂಪಿಸುತ್ತದೆ. ಈ ಕಾರ್ಯಯೋಜನೆಯಲ್ಲಿ ವಿವಿಧ ಮಾದರಿಯ ಹೊಸ ಬಸ್ಸುಗಳನ್ನು ವಾಹನ ಬದಲಾವಣೆ: ಹೊಸ ಮಾರ್ಗಸೂಚಿಗಾಗಿ ಒಳಗೊಂಡಿರುತ್ತವೆ. ಈ ಪ್ರಕಾರ ಹೊಸ ವಾಹನಗಳನ್ನು ವಿಭಾಗವಾರು ಹಂಚಿಕೆ ಮಾಡಲಾಗುತ್ತದೆ. ಈ ರೀತಿ ಪಡೆಯಲಾದ ಹೊಸ ಬಸ್ಸುಗಳನ್ನು ಡಿಪೋಗಳ ಕಾರ್ಯ ಸಾಧನೆ: ವಾಹನ ಬದಲಾವಣೆಗೆ ಹೊಸ ಮಾರ್ಗಕ್ಕಾಗಿ ವಾಹನಗಳ ಮರು ಹಂಚಿಕೆಯನ್ನು ವಿಭಾಗದ ನಿಯಂತ್ರಣಾಧಿಕಾರಿಯವರು ಮಾಡುವುದಾಗಿರುತ್ತದೆ.

ಊ) ಪ್ರಶ್ನೆ 'ಈ' ನಲ್ಲಿ ಉತ್ತರಿಸಿರುವಂತೆ ಉತ್ತರವೆ ಅನ್ವಯಿಸುವುದು.

ರಾಜ್ಯದಲ್ಲಿ ಸೀಮೆಎಣ್ಣೆಯ ಅಭಾವ

417. ಶ್ರೀ ಕೆ.ಎಸ್. ಈಶ್ವರಪ್ಪ, (ಶಿವಮೊಗ್ಗ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸೀಮೆಎಣ್ಣೆ ಅಭಾವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಅಭಾವಕ್ಕೆ ಕಾರಣಗಳೇನು ?

ಇ) ಅದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) – ಬಂದಿದೆ –

ಆ) ರಾಜ್ಯದ ಬೇಡಿಕೆಯು ಪ್ರತಿ ತಿಂಗಳಿಗೆ 67,000ಕೆ.ಎಲ್. ಇದ್ದು ಕೇಂದ್ರ ಸರ್ಕಾರವು ಬಿಡುಗಡೆ ಮಾಡುತ್ತಿರುವ ಪ್ರಮಾಣ 47,513 ಕೆ.ಎಲ್. ಆಗಿದೆ. ಇದರಿಂದ ರಾಜ್ಯದಲ್ಲಿ ಸ್ವಲ್ಪ ಅಭಾವಕ್ಕೆ ಕಾರಣವಾಗಿರುತ್ತದೆ.

ಇ) ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಹೆಚ್ಚುವರಿಯಾಗಿ ಸೀಮೆಎಣ್ಣೆ ಪ್ರಮಾಣವನ್ನು ಬಿಡುಗಡೆ ಮಾಡಬೇಕೆಂದು ಕೋರಲಾಗಿದೆ. ಅಲ್ಲದೇ ಇಗಿರುವ ಹಂಚಿಕೆಯಲ್ಲಿ ಸೀಮೆಎಣ್ಣೆ ಅತ್ಯಾವಶ್ಯಕವಿರುವ ಜನರಿಗೆ ಅಗತ್ಯ ಪ್ರಮಾಣದಲ್ಲಿ ವಿತರಿಸಲು ಅನುಕೂಲವಾಗುವಂತೆ ಎಲೆಕ್ಟ್ರಿಕ್: ಎಲ್.ಪಿ.ಜಿ. ಸೌಲಭ್ಯವಿರುವ ಕಾರ್ಡುದಾರರಿಗೆ ಕಡಿಮೆ ಪ್ರಮಾಣದಲ್ಲಿ, ಉರುವಲಕ್ಕಾಗಿ ಸೀಮೆಎಣ್ಣೆಯನ್ನೇ ಅವಲಂಬಿಸಿದ ಕಾರ್ಡುದಾರರಿಗೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ವಿತರಿಸುವಂತೆ ಕ್ರಮ ಕೈಗೊಳ್ಳಲಾಗಿದೆ.